ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು, ಕೆಂದಾಯ ಸಚಿವರ ಪರವಾಗಿ). — ವಿಧಾನ ಸಭಾ ಸದಸ್ಯರಾದ ಶ್ರೀ ಬಾಬುರೆಡ್ಡಿ ವಿ. ತುಂಗಳ್ ಇವರು ನಿಯಮಾವಳಿ ಪಿಸಿಲರ ಅಡಿ ಪ್ರಸ್ತಾಪಿಸಲು ಸೂಚಿಸಿರುವ ವಿಷಯ ಕುರಿತಂ, ಮಾನ್ಯ ಕಂದಾಯ, ಯೋಜನಾ ಹಾಗೂ ನೀರಾವರೀ ಸಚಿವರು ನೀಡಿದ ಹೇಳಿಕೆ.

ದಿನಾಂಕ ೫-೪-೧೯೮೮ ರಂದು ಜಮಖಂಡಿ ತಾಲ್ಲೂಕು ಅಲಬಾಳ ಗ್ರಾಮದಲ್ಲಿ ಆಕಸ್ಮಿಕ ಅಗ್ನಿ ಉಂಟಾಗಿ ೩೩ ಗುಡಿಸಲುಗಳು ಸುಟ್ಟು ಹೋಗಿರುವುದು ಸರಿಯಷ್ಟೆ. ಈ ತರಹ ಪ್ರಕೃತಿ ವಿಕೋಪಗಳಲ್ಲಿ ನೊಂದ ಸಂತ್ರಸ್ಥರಿಗೆ ನೀಡುವ ಪರಿಹಾರ.

೧) ನಗದು ಪರಿಹಾರ ... ಗರಿಷ್ಟ ರೂಪಾಯಿ ೧೨೦೦,೦೦

೨) ಕಟ್ಟಡ ಸಾಮಗ್ರಿಗಳ ರೂಪದಲ್ಲಿ ... ಗರಿಷ್ಟ ರೂಪಾಯಿ ೧೦೦೦,೦೦

ಈ ರೀತಿ ಪರಿಹಾರ ನೀಡಲು ಸರಕಾರವು ಈಗಾಗಲೇ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಹಣ ಬಿಡುಗಡೆ ಮಾಡಿದೆ. ಜಿಲ್ಲಾಧಿಕಾರಿ, ಬಿಜಾಪುರ ಇವರು ತಮ್ಮ ಆದೇಶ ದಿನಾಂಕ ೨೮-೫-೧೯೮೮ ರಂದು ತಹಶೀಲ್ದಾರ್ ಜಮಖಂಡಿ, ಇವರಿಗೆ, ರೂ. ೩೦,೦೦೦ ಗಳ ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ. ಜಿಲ್ಲಾಧಿಕಾರಿಗಳು ಒದಗಿಸಿರುವ ಮಾಹಿತಿ ಮತ್ತು ನೀಡಿರುವ ಆಶ್ವಾಸನೆ ಪ್ರಕಾರ ದಿನಾಂಕ ೫-೪-೧೯೮೮ ರಂದು ಜಮಖಂಡಿ ತಾಲ್ಲೂಕು ಅಲಬಾಳ ಗ್ರಾಮದಲ್ಲಿ ಉಂಟಾದ ಆಕಸ್ಮಿಕ ಅಗ್ನಿ ಅನಾಹುತದಲ್ಲಿ ನೊಂದ ಅರ್ಹ ಸಂತ್ರಸ್ಥರಿಗೆಲ್ಲಾ ನಿಯಮಗಳಂತೆ ನೀಡಬಹುದಾದ ಪರಿಹಾರವನ್ನು ತಕ್ಷಣ ವಿತರಣೆ ಮಾಡುವ ವ್ಯವಸ್ಥೆ ಮಾಡಿದ್ದಾರೆ. ಈ ರೀತಿ ಪರಿಹಾರ ಪಡೆದ ಸಂತ್ರಸ್ಥರು ತಮ್ಮ ಗುಡಿಸಲುಗಳನ್ನು ದುರಸ್ಥಿ ಪಡಿಸಿಕೊಂಡು ಪುನರ್ ನಿರ್ಮಿಸಿಕೊಂಡು ಅವರವರ ಗುಡಿಸಲುಗಳಲ್ಲಿ ಪುನಃ ವಾಸಿಸಲು ಸಹ ಅನುಕೂಲವಾಗುತ್ತದೆ.

(೩) ಕಾಪು ಕ್ಷೇತ್ರದ ಕಟಪಾಡಿ ಮಂಡಳದ ಎಣಗುಡ್ಡೆ ಗ್ರಾಮದ ನದಿಗೆ ಉಪ್ಪು ನೀರಿನ ತಡೆಗೋಡೆ ನಿರ್ಮಿಸಲು ಒತ್ತಾಯ

ಶ್ರೀ ವಸಂತ ವಿ. ಸಾಲಿಯಾನ್.— ಮಾನ್ಯ ಅಧ್ಯಕ್ಷರೇ, ಕಾಪು ಕ್ಷೇತ್ರದ ಕಟಪಾಡಿ ಮಂಡಳದ ಎಣಗುಡ್ಡೆ ಗ್ರಾಮದ ಕಂಬಳಕಟ್ಟು ಪ್ರದೇಶಕ್ಕೆ ನದಿಯ ಉಪ್ಪು ನೀರು ಒಳಕ್ಕೆ ಬಂದು ಆ ಪ್ರದೇಶದ ರೈತರ ಕೃಷಿ ಮತ್ತು ನೀರಿನ ಕೆರೆಗಳು ಉಪ್ಪು ನೀರಿನಿಂದ ಹಾಳಾಗಿವೆ. ಇದರಿಂದ ಆ ಪ್ರದೇಶದ ರೈತರು ಹಲವಾರು ವರ್ಷಗಳಿಂದ ಕಷ್ಟ ನಷ್ಟಕ್ಕೆ ಒಳಗಾಗಿದ್ದಾರೆ. ಅಲ್ಲಿ ಒಂದೇ ಬೆಳೆ ಬೆಳೆಯಲು ಆಗುತ್ತದೆ. ಆದುದರಿಂದ ಈ ಪ್ರದೇಶಕ್ಕೆ ಒಂದು ಉಪ್ಪು ನೀರು ತಡೆ ಅಣೆಕಟ್ಟನ್ನು ರಚಿಸಲು ನಾನು ೧೯೮೩ ರಿಂದ ಸರಕಾರದ ಗಮನಕ್ಕೆ ತಂದಿರುತ್ತೇನೆ. ಆದರೆ ಈ ತನಕ ಆ ಪ್ರದೇಶಕ್ಕೆ ಉಪ್ಪು ನೀರು ತಡೆಗೋಡೆಗೆ ಮಂಜೂರಾತಿ ಆಗಲಿಲ್ಲ. ಸರಕಾರವು ಈ ಗಂಭೀರವಾದ ವಿಚಾರವನ್ನು ಪರಿಶೀಲಿಸಿ ಕೂಡಲೇ ಅಲ್ಲಿಗೆ ಒಂದು ಉಪ್ಪು ನೀರು ತಡೆಗೊಡೆಯನ್ನು ಮಾಡಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಖಾತೆಯ ಸಚಿವರು).— ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಉತ್ತರವನ್ನು ತರಿಸಿಕೊಡುತ್ತೇನೆ.

೪) ಕುಮಟಾ ತಾಲ್ಲೂಕಿನಲ್ಲಿರುವ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿರುವ ಶಿಕ್ಷಕರನ್ನು ಪರ್ಯಾಯಿಸಲು ಒತ್ತಾಯ.

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲ್ಲೂಕಿನಲ್ಲಿರುವ ಸರಕಾರಿ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿರುವ ಶಿಕ್ಷಕರಲ್ಲಿ ಹೆಚ್ಚಿನ ಶಿಕ್ಷಕರು ೬-೭ ವರ್ಷಗಳಿಗಿಂತಲೂ ಹೆಚ್ಚಿನ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಅವರೆಲ್ಲರೂ ಉತ್ತರ ಕನ್ನಡ ಜಿಲ್ಲೆಯ ಕುಮಟಾ

ತಾಲ್ಲೂಕಿನವರೇ ಆಗಿದ್ದಾರೆ. ಈ ಶಿಕ್ಷಕರುಗಳು ಆಗಾಗ ಕಾಲೇಜಿನಲ್ಲಿ ಗೊಂದಲ ಎಬ್ಬಿಸುತ್ತಿದ್ದು ವಿಷಾವಂತ ಸ್ವಜನ ಪಕ್ಷಪಾತಿಗಳಾಗಿದ್ದಾರೆ. ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ಪ್ರಾರಂಭಿಸಿ ಅವರ ಶಿಕ್ಷಣ ಮುಗಿದು ಹೊರಗ ಹೋಗುವವರೆಗೂ ತಮ್ಮ ತಮ್ಮ ಜಾತಿಯ ವಿದ್ಯಾರ್ಥಿಗಳನ್ನು ಈ ಶಿಕ್ಷಕರುಗಳು ಫೋಷಿಸುತ್ತಾ ಬರುತ್ತಾರೆ. ಹಲವಾರು ವರ್ಷಗಳಿಂದ ಈ ರೀತಿ ಅಲ್ಲಿ ನಡೆದು ಹೋಗಿದೆ. ದಿನಾಂಕ ೧೯-೫-೮೮ ರಂದು ಆಗಿನ ಶಿಕ್ಷಣ ಮಂತ್ರಿ ಶ್ರೀ ರಘುಪತಿಯವರಿಗೆ ನಾನು ಪತ್ರ ಬರೆದು ಅಲ್ಲಿನ ಶಿಕ್ಷಕರುಗಳನ್ನು ಬೇರೆ ಕಡೆ ವರ್ಗಾಯಿಸುವಂತೆ ಕೇಳಿಕೊಂಡೆ. ಆದರೆ ಆ ಪತ್ರ ಎಲ್ಲೋ ಕಸದ ಬುಟ್ಟಿಗೆ ಸೇರಿ ಹೋಗಿರಬೇಕು ಅಥವಾ ಕಾಂಗ್ರೆಸ್(ಐ) ಸದಸ್ಯ ಬರೆದ ಪತ್ರವಾಗಿರಬೇಕೆಂದು ಅನಲ್ಲಿ ಶಿಕ್ಷಕರೆಲ್ಲರೂ ಜನತಾ ಪಕ್ಷದ ಪಕ್ಷಪಾತಿಗಳೆಂದು ರಕ್ಷಣೆ ಒದಗಿಸಿದ್ದಿರಬಹುದು. ಈಗಲಾದರೂ ಅವರನ್ನು ಕಾನೂನ ಬಾಹಿರವಾಗಿ ಅಲ್ಲಿಯೇ ಇರುವುದನ್ನು ಪ್ರತಿಬಂಧಿಸಿ ಬೇರೆ ಜಿಲ್ಲೆಗಳಿಗೆ ವರ್ಗಾಯಿಸಲಂ ಸರಕಾರದ ಗಮನ ಸೆಳೆಯುತ್ತೇನೆ. ಇದರ ಜೊತೆಗೆ ನಾನು ದಿನಾಂಕ ೧೯-೫-೧೯೮೮ ರಂದು ಬರೆದ ಪತ್ರವನ್ನು ಲಗತ್ತಿಸಿದ್ದೇನೆ, ತಮ್ಮ ಕಡೆ ಇವೆರಡನ್ನು ಕಳುಹಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು. - ವಿಯಮ ೩೫ರ ಕೆಳಗೆ ತಮ್ಮ ಹೆಸರಿನಲ್ಲಿ ಇನ್ನೊಂದು ನೋಟೀಸ್ ಇದೆ. ಅದನ್ನು ಸಹ ಓದಿಬಿಡಿ.

೫) ಹೊನ್ನಾವರ ತಾಲ್ಲೂಕಿನ ನಗರ ಬಸ್ತಿಕೇರಿ ಮಂಡಲ ಪಂಚಾಯತ ಕ್ಷೇತ್ರದ ಬೇಗೋಡಿ ಗ್ರಾಮದಲ್ಲಿರುವ ಬೆಳೆಯನ್ನು ಕಾಡಾನೆಗಳು ನಾಶಮಾಡಿರುವುದು.

ಶ್ರೀ ಆರ್. ಎನ್. ನಾಯಕ್.— ಮಾನ್ಯ ಅಧ್ಯಕ್ಷರೇ, ಹೊನ್ನಾವರ ತಾಲ್ಲೂಕಿನ ನಗರ ಬಸ್ತಿಕೇರಿ ಮಂಡಲ ಪಂಚಾಯತ್ ಕ್ಷೇತ್ರದಲ್ಲಿರುವ ಬೇಗೋಡಿ ಗ್ರಾಮವು ಸಹ್ಯಾದ್ರಿಯ ಮಡಿಲಲ್ಲಿರುವ ಚಿಕ್ಕಹಳ್ಳಿ ಅಲ್ಲಿ ಕಾಡಾನೆಯ ಕಾಟ ವಿಪರೀತವಾಗಿ, ನೆಟ್ಟ ತೆಂಗು, ಅಡಿಕೆ, ಬಾಳೆ ಗಿಡಗಳನ್ನು ಆನೆ ತಿಂದು ತುಳಿದು ನಾಶಪಡಿಸಿರುತ್ತದೆ. ಈ ಬಗ್ಗೆ ಅಲ್ಲಿನ ನಿವಾಸಿ ಪರಮೇಶ್ವರ ಹಂಡೆಯವರು ಮಾನ್ಯ ಮುಖ್ಯ ಮಂತ್ರಿಗಳಿಗೆ ೨ ಅರ್ಜಿ, ಅರಣ್ಯ ಮಂತ್ರಿಗಳಿಗೆ ೧ ಅರ್ಜಿ, ಕೆನರಾ ಸರ್ಕಲ್ ಇನ್ಸರ್‌ವೇಟರ್ ಅವರಿಗೆ ೪ ಅರ್ಜಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಹೊನ್ನಾವರ ಇವರಿಗೆ ೩ ಅರ್ಜಿ, ಗೇರಸೊಪ್ಪಾ ಆರ್. ಎಫ್. ಓ. ಅವರಿಗೆ ೯ ಅರ್ಜಿ ಹಾಗೂ ಕಾರವಾರ ಜಿಲ್ಲಾಪರಿಷತ್ ಹಾಗೂ ಜಿಲ್ಲಾಧಿಕಾರಿಗಳಿಗೆ ಅರ್ಜಿಗಳನ್ನು ಬರೆದು ಸೋತು ಸುಣ್ಣವಾಗಿದ್ದಾರೆ. ಯಾರಿಂದಲೂ ಈ ತನಕ ಪರಿಹಾರ ಇಲ್ಲವೆಂದು ತಿಳಿಸಿರುತ್ತಾರೆ ಹಲವಾರು ರೈತರ ಬೆಳೆನಾಶವಾಗಿದೆಯಲ್ಲದೆ, ಪರಮೇಶ್ವರ ಹಂಡೆಯವರ ಅಜಮಾಸು ೫೦,೦೦೦-೦೦ ರೂಪಾಯಿಗಳ ಬೆಳೆ ನಾಶವಾಗಿದೆ.

ಈಗಲಾದರೂ ಸ್ಥಳಕ್ಕೆ ಭೇಟಿ ನೀಡಿ ನೊಂದವರಿಗೆ ಪರಿಹಾರ ಒದಗಿಸುವ ಬಗ್ಗೆ ಆದೇಶಿಸಲು ಅರಣ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ — ಮಾನ್ಯ ವಿದ್ಯಾ ಮಂತ್ರಿಗಳು ಮತ್ತು ಮಾನ್ಯ ಅರಣ್ಯ ಮಂತ್ರಿಗಳು ಈಗ ಸಭೆಯಲ್ಲಿ ಇಲ್ಲ. ಆದ್ದರಿಂದ ಈ ಎರಡು ವಿಷಯಗಳಿಗೆ ಸಂಬಂಧಪಟ್ಟಂತೆ ಅವರಿಂದ ಉತ್ತರವನ್ನು ಮಾನ್ಯ ಸದಸ್ಯರಿಗೆ ತರಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.— ನಾನು ೩ನೇ ತಾರೀಖು ಇದನ್ನು ತಮಗೆ ಕಳುಹಿಸಿ ಕೊಟ್ಟಿದ್ದೇನೆ. ಇನ್ನೂ ಉತ್ತರ ತರಿಸಿಕೊಡದಿದ್ದರೆ ಹೇಗೆ ? ಮಾನ್ಯ ಮಂತ್ರಿಗಳು ಈ ಬಗ್ಗೆ ಯಾವ ಪ್ರಯತ್ನವನ್ನೂ ಮಾಡುವುದಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್ —ಈ ಹಿಂದಿನ ದಿನ ನಿಯಮ ೩೫ರ ಮೇಲೆ ಬಂದಿದ್ದ ೨೩ ನೋಟಿಸ್ ಗಳ ಪೈಕಿ ೧೬ಕ್ಕೆ ಉತ್ತರ ಕೊಟ್ಟಿದ್ದೇವೆ ಆದರ ಹಿಂದಿನ ದಿನ ೨೦ ರಲ್ಲಿ ೧೭ಕ್ಕೆ ಉತ್ತರ ಕೊಟ್ಟಿದ್ದೇವೆ ಆದರೆ ಒಂದೊಂದು ಸಲ ಉತ್ತರ ಕೊಡಲು ತಡವಾಗುತ್ತದೆ. ಈ ಎರಡು ವಿಚಾರಗಳಿಗೆ ಸಂಬಂಧಪಟ್ಟಂತೆ ನಾನು ತಮಗೆ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಆರ್. ಎನ್. ನಾಯಕ್.— ನಿಮ ಪಕ್ಷದ ಪುಡಾರಿಗಳೇ ಈ ಶಿಕ್ಷಕರಿಗೆ ರಕ್ಷಣೆ ಕೊಡುತ್ತಿದ್ದಾರೆ. ಆದ್ದರಿಂದ ಇವರನ್ನು ನೀವು ಯಾವ ರೀತಿ ವರ್ಗ ಮಾಡುತ್ತೀರಿ ?